
# ತ್ರ್ಯಂಬಕೇಶ್ವರದ ಜ್ಯೋತಿರ್ಲಿಂಗ

ಕಥೆ: ಟಿ. ವಿಶ್ವನಾಥನ್ ಮತ್ತು ಎಂ. ಜಯಶ್ರೀ
ಚಿತ್ರ: ಶಂಕರ್

1

ಗೌತಮ ಮಹರ್ಷಿ ಮತ್ತು ಅವನ ಪತ್ನಿ ಅಹಲ್ಯೆ ಬ್ರಹ್ಮಗಿರಿಯ ತಪ್ಪಲಿನ ಆಶ್ರಮವೊಂದರಲ್ಲಿ ವಾಸಿಸುತ್ತಿದ್ದರು. ಒಮ್ಮೆ ವರ್ಷಗಟ್ಟಲೆ ಮಳೆಯೇ ಬಾರದ ಕಾರಣ ಆ ಪ್ರದೇಶವು ಬರಗಾಲದಿಂದ ತತ್ತರಿಸಿತು. ಆದ್ದರಿಂದ ದಂಪತಿಗಳಿಬ್ಬರೂ ಮಳೆಗಾಗಿ ಕಠಿಣ ತಪಸ್ಸನ್ನು ಆಚರಿಸಿ, ಶಿವನನ್ನು ಪ್ರಾರ್ಥಿಸಿದರು.




2

ಅವರ ಪ್ರಾರ್ಥನೆಯನ್ನು ಮನ್ನಿಸಿ ಈಶ್ವರನು ಆ ಭಾಗದಲ್ಲಿ ತುಂಬಾ ಮಳೆಯನ್ನು ಕರೆದನು. ಆಶ್ರಮದ ಬಳಿಯ ಕೆರೆ, ಬಾವಿಗಳು ನೀರಿನಿಂದ ತುಂಬಿದವು. ಆಶ್ರಮವು ಸಂಪದ್ಭರಿತವಾಯಿತು.




3


ಅಕ್ಕಪಕ್ಕದ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಋಷಿಮುನಿಗಳೂ, ಅವರ ಪತ್ನಿಯರೂ ಈ ಹಚ್ಚಹಸಿರು ಪ್ರದೇಶಕ್ಕೆ ಬಂದು ವಾಸ ಮಾಡಿದರು. ಇತರ ಋಷಿಗಳ ಪತ್ನಿಯರು ಇಂತಹ ಸಮೃದ್ಧಿಗೆ ಕಾರಣಳಾದ ಅಹಲ್ಯೆಗೆ ಕೃತಜ್ಞರಾಗಿರಲಿಲ್ಲ. ಅವರೊಳಗೆ ತೀವ್ರ ಭಿನ್ನಾಭಿಪ್ರಾಯ ತಲೆದೋರಿತು. ಹೀಗೇ ಕಾಲಕಳೆಯುತ್ತಿತ್ತು.




4 ಗೌತಮ ಮಹರ್ಷಿ ಮತ್ತು ಅಹಲ್ಯೆಯು ಮಾಡಿದ ಸತ್ಕಾರ್ಯವನ್ನು ಮರೆತ ಋಷಿ ಪತ್ನಿಯರು ಗಣೇಶನ ಬಳಿ ಪ್ರಾರ್ಥಿಸಿದರು.




5 ಗಣೇಶನು ಈ ಹೆಂಗಸರಿಗೊಂದು ಪಾಠವನ್ನು ಕಲಿಸಲು ಬಯಸಿದನು. ಅವರಿಗೆ ಸಹಾಯ ಮಾಡುವವನಂತೆ ಅಭಿನಯಿಸುತ್ತಾ ತಾನು ಒಂದು ಗೋವಿನ ರೂಪವನ್ನು ತಳೆದನು. ಗೌತಮನ ಆಶ್ರಮಕ್ಕೆ ನುಗ್ಗಿ ಅಲ್ಲಿಯ ಉದ್ಯಾನವನದಲ್ಲಿ ಸಿಕ್ಕಿದ್ದನ್ನೆಲ್ಲಾ ತಿನ್ನಲು ತೊಡಗಿದನು.





6 ಗೌತಮನು ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದು ಹಸುವನ್ನು ಸಮೀಪಿಸಿದನು. ಆದರೆ ಅವನು ಅದನ್ನು ಸಮೀಪಿಸುವ ಮೊದಲೇ ಆ ತೋರಿಕೆಯ ವೇಷಧಾರಿ ಹಸುವು ಸತ್ತು ಬಿದ್ದಿತು.




7 ಋಷಿಪತ್ನಿಯರು ಇಂತಹ ಅವಕಾಶಕ್ಕೆ ಕಾದಿದ್ದಂತೆ, ತಮ್ಮತಮ್ಮ ಗಂಡಂದಿರ ಹತ್ತಿರ ಧಾವಿಸಿದರು.





8 ಋಷಿಗಳು ಗೌತಮನ ಬಳಿಗೆ ಹೋದರು.




9 ಇದಕ್ಕೆ ಏನಾದರೂ ಪ್ರತಿಕ್ರಿಯೆ ತೋರುವ ಬದಲು ಗೌತಮನು ಶಿವನ ಧ್ಯಾನಕ್ಕೆ ತೊಡಗಿದನು. ಪರಿಣಾಮವಾಗಿ ಶಿವನು ಉಮಾದೇವಿಯೊಂದಿಗೆ ಅವನೆದುರು ಪ್ರತ್ಯಕ್ಷನಾದನು.



10 ಮಹಾದೇವನು ಗೌತಮನಿಗೆ ಇತರ ಋಷಿ ಪತ್ನಿಯರು ಮಾಡಿದ ದ್ರೋಹವನ್ನು ವಿವರಿಸಿದನು.




12 ಗೌತಮನು ದೇವದತ್ತವಾದ ಗಂಗಾಜಲವನ್ನು ಬೆಟ್ಟದ ತಪ್ಪಲಿನಲ್ಲಿದ್ದ ಒಂದು ಅತ್ತಿಯ ಮರದ ಕೆಳಗೆ ಸುರಿದನು.
ತಕ್ಷಣವೇ ಅಲ್ಲಿ ಗಂಗೆ ಉಕ್ಕಿ ಬಂದು, ಗೋದಾವರೀ ನದಿಯಾಗಿ ಹರಿಯತೊಡಗಿದಳು.







15 ಗೌತಮನಿಂದಾಗಿ ಈ ನದಿಯು ಹುಟ್ಟಿದ ಕಾರಣ ಅವಳನ್ನು ಗೌತಮಿ ಎಂದೂ, ಗೋದಾವರಿಯೆಂದೂ ಕರೆಯುತ್ತಾರೆ.
ಶಿವನು ಗೌತಮನಿಗೆ ದರ್ಶನ ನೀಡಿದ ಸ್ಥಳದಲ್ಲಿ ಶಿವನನ್ನು ತ್ರಯಂಬಕೇಶ್ವರ (ಮೂರು ಕಣ್ಣಿನ ಭಗವಂತ) ಎಂದು ಪೂಜಿಸುತ್ತಾರೆ ಮತ್ತು ಅವನು ಭಕ್ತಕೋಟಿಯನ್ನು ಸದಾ ಹರಸುತ್ತಿರುತ್ತಾನೆ.